## ಮುನ್ನುಡಿ

ಮಕ್ಕಳ ಸಮಗ್ರ ಬೆಳವಣಿಗೆಯಲ್ಲಿ ಕೌಶಲಗಳು ಹಾಗೂ ಮೌಲ್ಯಗಳು ನಿರ್ಣಾಯಕ ಪಾತ್ರವನ್ನು ವಹಿಸುತ್ತವೆ. ಇವುಗಳನ್ನು ಶಾಲಾ ಶೈಕ್ಷಣಿಕ ಚಟುವಟಿಕೆಗಳ ಜೊತೆಗೆ ಮೈಗೂಡಿಸಿಕೊಳ್ಳಲು ಅವಕಾಶ ನೀಡಿದಲ್ಲಿ ಉತ್ತಮ ನಾಗರಿಕರಾಗಲು ಸಹಾಯವಾಗುತ್ತದೆ. ಇಂತಹ ಅವಕಾಶಗಳನ್ನು ಮಕ್ಕಳಿಗೆ ಕಲ್ಪಿಸಲು ಹಾಗೂ ಮಕ್ಕಳಿಗೆ ಶಾಲೆಯ ಹೊರಗಿನ ಚಟುವಟಿಕೆಗಳ ಅನುಭವ ಒದಗಿಸಲು ವರ್ಷದಲ್ಲಿ 10 ದಿನಗಳು ಬ್ಯಾಗ್ ರಹಿತ ದಿನವನ್ನು ಆಚರಿಸಲು ನೂತನ ರಾಷ್ಟ್ರೀಯ ಶಿಕ್ಷಣ ನೀತಿ-2020 ಶಿಫಾರಸ್ಸು ಮಾಡಿದೆ. ಇದರನ್ವಯ ಮಕ್ಕಳಿಂದಲೇ ಮಕ್ಕಳಿಗಾಗಿ ರೂಪಿಸಿರುವ ಕಾರ್ಯಕ್ರಮ "ಸಂಭ್ರಮ ಶನಿವಾರ"-ಬ್ಯಾಗ್ ರಹಿತ ದಿನ-ವನ್ನು 2020-21 ನೇ ಸಾಲಿನಿಂದ ಕರ್ನಾಟಕ ರಾಜ್ಯದ ಪ್ರಾಥಮಿಕ ಶಾಲೆಗಳಲ್ಲಿ ತಿಂಗಳಿಗೆ ಒಂದು ಶನಿವಾರದಂದು ಆಚರಿಸಲು ನಿರ್ಧರಿಸಲಾಗಿತ್ತು. ಆದರೆ ಮಹಾಮಾರಿ ಕೋವಿಡ್ ಸೋಂಕಿನ ಹರಡುವಿಕೆಯಿಂದ ಈ ಕಾರ್ಯಕ್ರಮವನ್ನು 1 ರಿಂದ 8 ನೇ ತರಗತಿ ಮಕ್ಕಳಿಗೆ 2021-2022 ಸಾಲಿನಿಂದ ಅಳವಡಿಸಲಾಗುವುದು.

ಸಂಭ್ರಮ ಶನಿವಾರದಂದು ಯಾವುದೇ ಪುಸ್ತಕ, ನೋಟ್‌ಪುಸ್ತಕ, ಬ್ಯಾಗ್ ಇಲ್ಲದೆ ಮಕ್ಕಳು ಶಾಲೆಗೆ ಬರುತ್ತಾರೆ. ಸಂತಸದ ಕಲಿಕೆಯ ಮೂಲಕ ಚಟುವಟಿಕೆ ಆಧಾರಿತ ಕಲಿಕೆಯನ್ನು ಪ್ರೋತ್ಸಾಹಿಸಲು ಆರೋಗ್ಯಕರ ಜೀವನಶೈಲಿ, ಸ್ವಾಸ್ಥ್ಯ ಮತ್ತು ಶುಚಿತ್ವ, ನಾಗರಿಕ ಸೌಲಭ್ಯಗಳು ಇತ್ಯಾದಿಯಂತಹ 10 ವಿಷಯಗಳಲ್ಲಿ ಮಕ್ಕಳಿಗಾಗಿ ವಿದ್ಯಾರ್ಥಿ ಕೈಪಿಡಿಗಳನ್ನು ಹಾಗೂ ಸಂಭ್ರಮ ಶನಿವಾರ ಕಾರ್ಯಕ್ರಮವನ್ನು ಹೇಗೆ ಅಳವಡಿಸಬೇಕು ಎಂಬ ಮಾರ್ಗಸೂಚಿಗಳನ್ನೊಳಗೊಂಡ ಶಿಕ್ಷಕರ ಕೈಪಿಡಿಯನ್ನು ಶಿಕ್ಷಕರಿಂದಲೇ ರಚಿಸಲ್ಪಟ್ಟಿದೆ. ವಿದ್ಯಾರ್ಥಿ ಕೈಪಿಡಿಯಲ್ಲಿ ವಿಷಯವನ್ನು ಆಳವಾಗಿ ಅರ್ಥೈಸಲು ಅರಿವು, ಅನುಭವ ಮತ್ತು ಅವಲೋಕನ ಎಂಬ ಮೂರು ಹಂತಗಳಲ್ಲಿ ವಿದ್ಯಾರ್ಥಿಗಳೇ ಸ್ವಂತವಾಗಿ ಕೈಗೊಳ್ಳಬಹುದಾದ ಚಟುವಟಿಕೆಗಳನ್ನು ನೀಡಿದೆ. ಕಾರ್ಯಕ್ರಮ ಪ್ರಾರಂಭಿಸುವ ಮುನ್ನ ಶಿಕ್ಷಕರು ಶಿಕ್ಷಕರ ಕೈಪಿಡಿಯನ್ನು ಸಂಪೂರ್ಣವಾಗಿ ಓದಿ ವಿದ್ಯಾರ್ಥಿಗಳಿಗೆ ಸೂಕ್ತ ಮಾರ್ಗದರ್ಶನ ನೀಡುವುದು.

ವಿದ್ಯಾರ್ಥಿ ಕೈಪಿಡಿಗಳು ಹಾಗೂ ಶಿಕ್ಷಕರ ಕೈಪಿಡಿಗಳ ರಚನೆಯಲ್ಲಿ ಸಹಕರಿಸಿದ ಅಜೀಂ ಪ್ರೇಂ ಜೀ ಫೌಂಡೇಶನ್, ಗ್ರ್ಯಾಮ್ ಸಂಸ್ಥೆ, ಮೈಸೂರು, ಉದ್ಯಮ್ ಫೌಂಡೇಶನ್ ಹಾಗೂ ಡ್ರೀಮ್ ಎ ಡ್ರೀಮ್ ಸಂಸ್ಥೆಯವರು ಹಾಗೂ ರಚನಾ ಸಮಿತಿಯವರಿಗೆ ಶಿಕ್ಷಣ ಇಲಾಖೆಯು ಆಭಾರಿಯಾಗಿದೆ.

**ನಿರ್ದೇಶಕರು**
ಡಿ.ಎಸ್.ಇ.ಆರ್.ಟಿ

## ಘನತ್ಯಾಜ್ಯದ ನಿರ್ವಹಣೆಯ ಅಗತ್ಯತೆ ಹಾಗೂ ವಿಧಾನಗಳು


| | ಶೀರ್ಷಿಕೆ | | | ಪು.ಸಂಖ್ಯೆ |
|---|---|---|---|---|
| | ಪೀಠಿಕೆ | | | 2–3 |
| 1 – 3 | ಅರಿವು | : | "ಸಂಗ್ರಹಿಸೋಣ ಬಾರಾ – ವಿಂಗಡಿಸೋಣ ಬಾರಾ" | 4–5 |
| 1 – 3 | ಅನುಭವ | : | ಚಿತ್ರ ಬರಿ ಬರಿ ಅನುಭವ ಪರಿ ಪರಿ | 6–7 |
| 1 – 3 | ಅವಲೋಕನ | : | "ನನ್ನ ಪಾತ್ರ" | 8 |
| 4 – 5 | ಅರಿವು | : | ಕಸ ನಿಜವಾಗಿಯೂ ಕಸವೇ | 9 |
| 4 – 5 | ಅನುಭವ | : | ಅಭಿನಯದ ಅನುಭವ | 10 |
| 4 – 5 | ಅವಲೋಕನ | : | ಕಸದಿಂದ ರಸ | 11 |
| 6 – 8 | ಅರಿವು | : | ಬನ್ನಿ ಚಿತ್ರ ಬಿಡಿಸೋಣ ! | 12 |
| 6 – 8 | ಅನುಭವ | : | ಅಭಿನಯದ ಅನುಭವ | 13 |
| 6 – 8 | ಅವಲೋಕನ | : | ಚಟುವಟಿಕೆ ಹೆಸರು : ನನ್ನ ಪಾತ್ರ | 14–15 |
| | ಪ್ರತಿಜ್ಞೆ | | | 16 |
| | ಸಲಹಾತ್ಮಕ ಚಟುವಟಿಕೆಗಳು | | | 16 |

# ವಿಷಯ : ಸಾರ್ವಜನಿಕ ನೈರ್ಮಲ್ಯ

## ☛ ಹಿನ್ನೆಲೆ

ಪರಿಸರವೆಂಬುದು ವೈವಿಧ್ಯತೆಯ ಗೂಡು. ಇಂತಹ ಪರಿಸರವು ಪ್ರಮುಖವಾಗಿ ಜೈವಿಕ ಅಂಶಗಳು ಹಾಗೂ ಅಜೈವಿಕ ಅಂಶಗಳನ್ನು ಒಳಗೊಂಡಿವೆ. ಇಂತಹ ಜೈವಿಕ ಅಂಶಗಳಾದ ಪ್ರಾಣಿವರ್ಗ ಮತ್ತು ಸಸ್ಯವರ್ಗಗಳ ನಿರಂತರ ಚಟುವಟಿಕೆಗಳಿಂದ ಉತ್ಪತ್ತಿಯಾಗುವ ಅನುಪಯುಕ್ತ ಅಥವಾ ತಿರಸ್ಕೃತವೆಂದೆಣಿಸಲ್ಪಡುವ ವಸ್ತುವೇ ತ್ಯಾಜ್ಯವಾಗಿರುತ್ತದೆ. ತ್ಯಾಜ್ಯಗಳಲ್ಲಿ ಪ್ರಮುಖವಾಗಿ ಘನತ್ಯಾಜ್ಯ, ದ್ರವತ್ಯಾಜ್ಯ ಮತ್ತು ಅನಿಲ ತ್ಯಾಜ್ಯವೆಂಬ ಮೂರು ವಿಧಗಳಿವೆ. ಇದರಲ್ಲಿ ಘನತ್ಯಾಜ್ಯವು ಹಸಿಕಸ, ಒಣಕಸ, ಎಲೆಕ್ಟ್ರಾನಿಕ್ ಕಸ, ಲೋಹೀಯ ಕಸವೆಂದು ವಿಂಗಡಿಸಬಹುದಾಗಿದೆ. ಈ ಘನತ್ಯಾಜ್ಯದ ಮೂಲ ಉತ್ಪತ್ತಿ ತಾಣಗಳಾದ ವಸತಿಪ್ರದೇಶ, ಕೈಗಾರಿಕಾಪ್ರದೇಶ, ವಾಣಿಜ್ಯತಾಣಗಳು ಇನ್ನಿತರ ಸಾರ್ವಜನಿಕ ಸ್ಥಳಗಳಲ್ಲಿ ಘನತ್ಯಾಜ್ಯದ ನಿರ್ವಹಣೆಯು ಒಂದು ಸವಾಲಾಗಿ ಪರಿಣಮಿಸಿದೆ. ಇದರಿಂದಾಗುತ್ತಿರುವ ಅನಾರೋಗ್ಯಕರ ವಾತಾವರಣ ಹಾಗೂ ಕಿರಿಕಿರಿಯು ಮಾನಸಿಕ, ದೈಹಿಕ ಸ್ಥಿತಿಗಳನ್ನು ಹದಗೆಡಿಸುತ್ತಿರುವ ಕಾರಣ ಘನತ್ಯಾಜ್ಯ ನಿರ್ವಹಣೆಗೆ ಸೂಕ್ತ ಸೂತ್ರ ಅಥವಾ ವಿಧಾನಗಳನ್ನು ಪ್ರತಿ ನಾಗರಿಕನು ಅರಿಯಬೇಕಾದುದು ಅತ್ಯವಶ್ಯಕವೆನಿಸುತ್ತದೆ. ಘನತ್ಯಾಜ್ಯ ನಿರ್ವಹಣೆಯನ್ನು ವ್ಯಾಖ್ಯಾನಿಸುವುದಾದರೆ, ಉತ್ಪಾದನೆ–ಶೇಖರಣೆ, ಸಂಸ್ಕರಣೆ ಹಾಗೂ ವಿಲೇವಾರಿಯ ನಿಯಂತ್ರಣದೊಂದಿಗೆ ಶಿಸ್ತು ಎಂಬ ವೈಜ್ಞಾನಿಕ, ವ್ಯವಸ್ಥಿತ ಕ್ರಮಬದ್ಧತೆ ಹೊಂದಿರುವ ಅಂಶವೆನಿಸಿದೆ. ಘನತ್ಯಾಜ್ಯವು ಗ್ರಾಮೀಣ ಹಾಗೂ ನಗರ ಸಮುದಾಯಗಳೆರಡರಲ್ಲೂ ಕಂಡುಬಂದರೂ, ಅಲ್ಲಿನ ಉತ್ಪನ್ನಗಳ ಪ್ರಮಾಣ ವಿಲೇವಾರಿ ಕ್ರಮಗಳಲ್ಲಿ ಬಹು ವ್ಯತ್ಯಾಸಗಳಿರುತ್ತವೆ. ಹೀಗೆ ಏನೇ ವ್ಯತ್ಯಾಸಗಳಿದ್ದರೂ ಘನತ್ಯಾಜ್ಯದ ನಿರ್ವಹಣೆಯ ಬಗ್ಗೆ ತಿಳುವಳಿಕೆ ಹೊಂದಿರಬೇಕಾದುದು ಸರ್ವರ ಕರ್ತವ್ಯವಾಗಿರುತ್ತದೆ.

ಇದನ್ನು ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸಲು ಹಾಗೂ ಸಾಧಿಸಬೇಕಾದ ಕೆಲವು ನಿರ್ದಿಷ್ಟ ಉದ್ದೇಶಗಳು ಮತ್ತು ಕಲಿಕೆಯ ಫಲಿತಗಳನ್ನು ಗಮನದಲ್ಲಿಟ್ಟುಕೊಂಡು ಈ ಮಾಡ್ಯೂಲ್ ಅನ್ನು ವಿನ್ಯಾಸಗೊಳಿಸಲಾಗಿದೆ. ಸಂಭ್ರಮ ಶನಿವಾರದ ಪ್ರತಿಯೊಂದು ವಿಷಯವನ್ನು ಆಳವಾಗಿ ಅರಿತು ತೊಡಗಿಸಿಕೊಳ್ಳಲು ವಿದ್ಯಾರ್ಥಿಗಳಿಗೆ ಸಹಾಯವಾಗುವಂತೆ ಮಾಡಲು ಮಾಡ್ಯೂಲ್ ಅನ್ನು ಕೆಳಕಂಡಂತೆ ಮೂರು ಘಟಕಗಳಾಗಿ ವಿಂಗಡಿಸಲಾಗಿದೆ.

1) ಅರಿವು

2) ಅನುಭವ

3) ಅವಲೋಕನ/ಪ್ರತಿಫಲನ

ಈ ಮೂರು ಅಂಶಗಳು ಮಕ್ಕಳಿಗೆ ಬ್ಯಾಗ್ ರಹಿತ ದಿನ ಎಂಬ ಪರಿಕಲ್ಪನೆಯ ಪ್ರತಿಯೊಂದು ಘಟಕವನ್ನು ಆಳವಾಗಿ ಅರಿಯುವುದರ ಜೊತೆಗೆ ಅದರೊಡನೆ ತೊಡಗಿಸಿಕೊಳ್ಳಲು ಅವಕಾಶ ನೀಡುತ್ತವೆ.

ಇದು ಮಕ್ಕಳಿಗಾಗಿಯೇ ಆಯೋಜಿಸಲ್ಪಟ್ಟ ಕಾರ್ಯಕ್ರಮವಾಗಿದ್ದು ಮಕ್ಕಳೇ ಈ ಕೈಪಿಡಿಯನ್ನು ಜಾರಿಗೊಳಿಸುವಲ್ಲಿ ಮಹತ್ವದ ಪಾತ್ರವನ್ನು ವಹಿಸುವಂತೆ ಸಂರಚಿಸಲಾಗಿದೆ. ಇದರಲ್ಲಿ ಕೆಲವು ಹಿರಿಯ ವಿದ್ಯಾರ್ಥಿಗಳು ನೇತೃತ್ವ ವಹಿಸುವಂತೆ ಪ್ರೇರೇಪಿಸಬೇಕು. ಮಕ್ಕಳು ಸಕ್ರಿಯವಾಗಿ ಭಾಗವಹಿಸಿ, ಈ ಮಾಡ್ಯೂಲ್ ಅನ್ನು ಕಾರ್ಯರೂಪಕ್ಕೆ ತರುವ ನಿಟ್ಟಿನಲ್ಲಿ ಶಿಕ್ಷಕರು ಅವರಿಗೆ ಮಾರ್ಗದರ್ಶಕರಾಗಿ ಮಹತ್ವದ ಪಾತ್ರವನ್ನು ವಹಿಸಬೇಕಾಗುತ್ತದೆ. ಈ ಕೆಳಕಂಡ ಕಾರ್ಯಗಳನ್ನು ನಿರ್ವಹಿಸುವಲ್ಲಿ ಶಿಕ್ಷಕರು ವಿದ್ಯಾರ್ಥಿಗಳಿಗೆ ಒತ್ತಾಸೆ ಹಾಗೂ ಮಾರ್ಗದರ್ಶನ ನೀಡುವುದು;

- ಎಲ್ಲಾ ಮಕ್ಕಳು ಆಯಾ ಹಂತಗಳಿಗೆ ನೀಡಿರುವ ಚಟುವಟಿಕೆಗಳಲ್ಲಿ ಸಕ್ರಿಯವಾಗಿ ಭಾಗವಹಿಸುವುದನ್ನು ಖಾತ್ರಿಪಡಿಸಿಕೊಳ್ಳುವುದು.
- ಚಟುವಟಿಕೆಗಳಿಂದ ಯಾವ ವಿದ್ಯಾರ್ಥಿಯೂ ಹೊರ ಉಳಿಯದಂತೆ ಅಥವಾ ಒಂದೇ ವಿದ್ಯಾರ್ಥಿ ಪುನರಾವರ್ತನೆ ಆಗದಂತೆ ಪ್ರತಿ ಬಾರಿ ವಿವಿಧ ವಿದ್ಯಾರ್ಥಿಗಳು ಚಟುವಟಿಕೆಗಳ ನೇತೃತ್ವ ವಹಿಸುವುದನ್ನು ಖಾತ್ರಿಪಡಿಸಿಕೊಳ್ಳುವುದು.
- ಮಕ್ಕಳು ಚಟುವಟಿಕೆ ಕೈಗೊಳ್ಳುವಾಗ ಪೂರ್ಣ ಸ್ವಾತಂತ್ರ್ಯ ಹಾಗೂ ಅವಶ್ಯಕತೆ ಇದ್ದಾಗ ಅವರಿಗೆ ಸೂಕ್ತ ಮಾರ್ಗದರ್ಶನ ನೀಡುವುದು.
- ನಿರೂಪಿಸುತ್ತಿರುವ ವಿದ್ಯಾರ್ಥಿಗಳು ಅಪೇಕ್ಷೆಪಟ್ಟಾಗ ಮಾತ್ರ ಮಾರ್ಗದರ್ಶಿಸುವುದು, ಇಲ್ಲವಾದಲ್ಲಿ ಶಿಕ್ಷಕರು ಮಧ್ಯೆ ಪ್ರವೇಶಿಸಬಾರದು.
- ಅನೇಕ ಚಟುವಟಿಕೆಗಳಲ್ಲಿ ವಿದ್ಯಾರ್ಥಿ ನಾಯಕ/ನಿರೂಪಕರು ಚರ್ಚೆಗಳ ಸಾರಾಂಶವನ್ನು ಪರಿಣಾಮಕಾರಿಯಾಗಿ ಪ್ರಸ್ತುತಪಡಿಸಬೇಕಾಗುತ್ತದೆ. ಅಂತಹ ಸನ್ನಿವೇಶದಲ್ಲಿ ಅವರಿಗೆ ಹೆಚ್ಚಿನ ಮಾರ್ಗದರ್ಶನ ನೀಡುವುದು.
- ಶಾಲೆ ಅಥವಾ ತರಗತಿಗಳಲ್ಲಿ ಚರ್ಚೆ ಮತ್ತು ಕ್ರೀಡಾ ಪ್ರದರ್ಶನಗಳಿಗಾಗಿ ಪ್ರತ್ಯೇಕ ಸ್ಥಳಗಳನ್ನು ಗುರ್ತಿಸಿ ಅವಕಾಶ ಕಲ್ಪಿಸುವುದು.
- ಚಟುವಟಿಕೆಗಳನ್ನು ನಿರ್ವಹಿಸುವ ಮುನ್ನ ಅಗತ್ಯ ಲೇಖನ ಸಾಮಗ್ರಿಗಳು ಮತ್ತು ಇತರೆ ವಸ್ತುಗಳು ಲಭ್ಯವಾಗಿವೆಯೇ ಎಂದು ಖಚಿತ ಪಡಿಸಿಕೊಳ್ಳುವುದು.
- ಗುಂಪುಗಳನ್ನು ಮಾಡುವಾಗ ಬಾಲಕ ಮತ್ತು ಬಾಲಕಿಯರಿಗೆ ಸಮಾನ ಅವಕಾಶಗಳು ದೊರೆಯುವಂತೆ ಮುತುವರ್ಜಿ ವಹಿಸುವುದು.
- ಬ್ಯಾಗ್ ರಹಿತ ದಿನದ ಉದ್ದೇಶಗಳಿಗನುಗುಣವಾಗಿ ಕೊಂಚವೂ ಉತ್ಸಾಹ ಕಡಿಮೆಯಾಗದ ಹಾಗೆ ಚಟುವಟಿಕೆಗಳನ್ನು ನಿರ್ವಹಿಸುವಾಗ ಸಂತಸವಾದ ವಾತಾವರಣವಿರುವುದನ್ನು ಖಚಿತಪಡಿಸಿಕೊಳ್ಳುವುದು.
- ವಿದ್ಯಾರ್ಥಿಗಳನ್ನು ನಾಳಿನ ಉತ್ತಮ ಪ್ರಜೆಗಳನ್ನಾಗಿ ರೂಪಿಸುವಂತಹ ಮಹತ್ತರ ಉದ್ದೇಶವನ್ನು ಹೊಂದಿರುವ ಬ್ಯಾಗ್ ರಹಿತ ದಿನದ ಆಚರಣೆ ಅರ್ಥಪೂರ್ಣವಾಗುವಂತೆ ಚಟುವಟಿಕೆಗಳಲ್ಲಿ ಸಕ್ರಿಯವಾಗಿ ಪಾಲ್ಗೊಳ್ಳುವಂತೆ ವಿದ್ಯಾರ್ಥಿಗಳನ್ನು ಪ್ರೇರೇಪಿಸುವುದು.

ಅರಿವು :

ತರಗತಿ 1–3 : (60 ನಿಮಿಷಗಳು)

# "ಸಂಗ್ರಹಿಸೋಣ ಬಾರಾ – ವಿಂಗಡಿಸೋಣ ಬಾರಾ"

| ಮೊದಲ ಹಂತ : | ಎರಡನೇ ಹಂತ : | ಮೂರನೇ ಹಂತ : |
| --- | --- | --- |
| ನಿರ್ಧಾರಿತ ಹೇಳಿಕೆ – ಆಗಲಿ ಮನವರಿಕೆ. | ಕಸದ ಸಂಗ್ರಹಣೆ ಮತ್ತು ವಿಂಗಡಣೆ | ಅನುಭವಗಳ ಅಭಿವ್ಯಕ್ತಿ |

**ನಿರ್ಧಾರಿತ ಹೇಳಿಕೆ – ಆಗಲಿ ಮನವರಿಕೆ**

ಅ – ಅಲ್ಲಿ ಇಲ್ಲಿ ಕಸವ ಎಸೆಯಬೇಡಿ.

ಆ – ಆ ಕಸ ಜೀವಿಗಳ ಆರೋಗ್ಯ ಕೆಡಿಸುತ್ತದೆ.

ಇ – ಇಲ್ಲಿರುವ ಕಸವನ್ನು ಬೇರ್ಪಡಿಸಿ ಕಸದ ವಾಹನಕ್ಕೆ ಕೊಡಿ.

ಈ – ಈ ರೀತಿ ಕಸದ ವಿಲೇವಾರಿಯಲ್ಲಿ ಸಹಕರಿಸಿ.

ಉ – ಉತ್ತಮವಾದ ಶುಚಿ ಪರಿಸರ ನಮ್ಮದಾಗಲಿ.

ಊ – ಊರಿನ ಸೌಂದರ್ಯ ಕಸ ಮುಕ್ತ ಪರಿಸರದಲ್ಲಿದೆ.

ಋ – ಋಣಾತ್ಮಕ ಪರಿಣಾಮ ಬೀರುವ ಪ್ಲಾಸ್ಟಿಕ್ ಬೇಡವೇ ಬೇಡ.

ಎ – ಎಲ್ಲೆಡೆ ಸ್ವಚ್ಛತೆ ಪರಿಸರ ಮೂಡಿಸೋಣ.

ಏ – ಏರುತ್ತಿರುವ ಮಾಲಿನ್ಯ ತಡೆಯಲು ಕಸಕ್ಕೆ ಬೆಂಕಿ ಹಾಕದಿರೋಣ.

ಐ – ಐಶ್ವರ್ಯಕ್ಕಿಂತ ಮಿಗಿಲು ಸ್ವಚ್ಛತೆ ಮತ್ತು ಆರೋಗ್ಯ ಎಂದು ಅರಿಯೋಣ.

ಒ – ಒಂದು ಹೆಜ್ಜೆ ಸ್ವಚ್ಛತೆ ಕಡೆಗೆ.

ಓ – ಓದು ಬರಹದಷ್ಟೆ ಸ್ವಚ್ಛತೆ ಮುಖ್ಯ.

ಔ – ಔಷಧಿಯಿಂದ ದೂರವಿರಲು ಸ್ವಚ್ಛತೆಯೇ ದಾರಿದೀಪ.

ಅಂ – ಅಂಗಡಿಗಳಲ್ಲಿ ಕಳಪೆ ಗುಣಮಟ್ಟದ ಪ್ಲಾಸ್ಟಿಕ್ ಸಾಮಾನುಗಳನ್ನು ಮಾರದಿರೋಣ ಮತ್ತು ಕೊಳ್ಳದಿರೋಣ.

ಅಃ – ಅ: ಸ್ವಚ್ಛ ಸುಂದರ ಪರಿಸರ ನಿರ್ಮಿಸೋಣ.



'ರಸ ಬೆಳೆದು ಕಸ ತಿನ್ನಬೇಡ, ಹಸ ಹಟ್ಟಿ ಮೊಸರಿಗೆ ಪರದಾಡಬೇಡ'

**ನಿರೂಪಕರಿಗೆ/ವಿದ್ಯಾರ್ಥಿ ನಾಯಕರಿಗೆ ಸೂಚನೆಗಳು :**

- ವಿದ್ಯಾರ್ಥಿಗಳನ್ನು ಸನ್ನಿವೇಶಗಳಿಗೆ ಅನುಗುಣವಾಗಿ 5–6 ತಂಡಗಳಾಗಿ ವಿಂಗಡಿಸಿ ಪ್ರತ್ಯೇಕವಾಗಿ ಕುಳಿತುಕೊಳ್ಳಲು ತಿಳಿಸಿ.
- ಮೊದಲ ಹಂತದಲ್ಲಿ ಮೇಲೆ ನೀಡಿರುವ ನಿರ್ಧಾರಿತ ಹೇಳಿಕೆಗಳನ್ನು ಪ್ರತಿ ಗುಂಪಿನವರ ಮಕ್ಕಳಿಂದ ಹೇಳಿಸುವುದು.
- ಎರಡನೆಯ ಹಂತದಲ್ಲಿ ತಮ್ಮ ಶಾಲೆಯ ಸುತ್ತಮುತ್ತಲಿನ ಮೈದಾನದಲ್ಲಿ ಮತ್ತು ತರಗತಿಯ ಒಳಗಡೆ ಹಾಗೂ ಹೊರಗಡೆ ಬಿದ್ದಿರುವ ಕಸವನ್ನು ಸಂಗ್ರಹಿಸಲು ವಿವಿಧ ಗುಂಪುಗಳಿಗೆ ತಿಳಿಸುವುದು. ಅಗತ್ಯವಿದ್ದಲ್ಲಿ ಮನೆಯಲ್ಲಿನ ಕೆಲವು ವಿಧದ ಕಸಗಳನ್ನು ಶಾಲೆಗೆ ತರಲು ಮುಂಚಿತವಾಗಿಯೇ ಶಿಕ್ಷಕರು ಮಾರ್ಗದರ್ಶನ ನೀಡಿರಬೇಕು. ಹೀಗೆ ಮಾಡುವಾಗ ಸ್ವಚ್ಛತೆಯನ್ನು ಕಾಪಾಡುವ ಬಗ್ಗೆ ಸೂಕ್ತ ಮುನ್ನೆಚ್ಚರಿಕಾ ಕ್ರಮಗಳ ಬಗ್ಗೆ ತಿಳಿಸಬೇಕು.
- 3 ಬಣ್ಣದ ಕಸದ ಬುಟ್ಟಿಗಳ ಚಿತ್ರಗಳು ಹಾಗೂ ಬಣ್ಣದ ಬುಟ್ಟಿಗಳನ್ನು ಶಾಲೆಗಳಲ್ಲಿ ಇಡುವುದರಿಂದ ಕಸದ ವರ್ಗೀಕರಣ ಸುಲಭವಾಗುತ್ತದೆ.
  - ನೀಲಿ ಬಣ್ಣದ ಬುಟ್ಟಿ – ಒಣ ಕಸ
  - ಹಸಿರು ಬಣ್ಣದ ಬುಟ್ಟಿ – ಹಸಿ ಕಸ
  - ಕೆಂಪು ಬಣ್ಣದ ಬುಟ್ಟಿ – ಮರು ಚಕ್ರೀಕರಣಗೊಳಿಸಲಾಗದ ಕಸ
- ಮೂರನೆಯ ಹಂತದಲ್ಲಿ ಈಗಾಗಲೇ ಸಂಗ್ರಹ ಮಾಡಿರುವ ಕಸಗಳ ಸಹಾಯದಿಂದ ಕೆಳಕಂಡ ಅಂಶಗಳ ಬಗ್ಗೆ ಚರ್ಚಿಸಲು ಅವಕಾಶ ನೀಡುವುದು.
  - ನೀರಿನ ಅಂಶ ಇರುವ ಕಸಗಳು.
  - ನೀರಿನ ಅಂಶ ಇಲ್ಲದ ಕಸಗಳು.
  - ಬೇಗ ಕೊಳೆಯುವ/ಹಾಳಾಗುವ ಕಸಗಳು.
  - ಬೇಗ ಕೊಳೆಯದ/ಹಾಳಾಗದೆ ಇರುವ ಕಸಗಳು.
- ನಂತರ ಚರ್ಚೆಯನ್ನು ಸಾರಾಂಶೀಕರಿಸುವುದು.

## ಅನುಭವ :

**ತರಗತಿ 1–3 :** **ಚಿತ್ರ ಬರಿ ಬರಿ ಅನುಭವ ಪರಿ ಪರಿ** (60 ನಿಮಿಷಗಳು)







ಕಸವನ್ನು ಎಲ್ಲೆಂದರಲ್ಲಿ ಎಸೆಯುತ್ತಿರುವ ಚಿತ್ರ

ಪ್ರಾಣಿಯು ಪ್ಲಾಸ್ಟಿಕ್ ಅನ್ನು ಅಗಿಯುತ್ತಿರುವ ಚಿತ್ರ

ಕಸ ಸಂಗ್ರಹಣೆ ಮಾಡುವ ಚಿತ್ರ

**"ಚಿತ್ರ ಬರಿ ಬರಿ ಅನುಭವ ಪರಿ ಪರಿ"**

ಕಸವನ್ನು ಸೂಕ್ತವಾಗಿ ವಿಲೇವಾರಿ ಮಾಡುತ್ತಿರುವ ಚಿತ್ರ

ಕಸದಿಂದ ಉಪಯುಕ್ತ ವಸ್ತುಗಳನ್ನು ತಯಾರಿಸಿರುವ ಚಿತ್ರ

ಕಸವನ್ನು ಸರಿಯಾಗಿ ನಿರ್ವಹಣೆ ಮಾಡದೇ ಉಂಟಾಗಿರುವ ತೊಂದರೆಯನ್ನು ತೋರಿಸುವ ಚಿತ್ರ







## ನಿರೂಪಕರಿಗೆ/ವಿದ್ಯಾರ್ಥಿ ನಾಯಕರಿಗೆ ಸೂಚನೆಗಳು :

### ಮೊದಲ ಹಂತ : ನಾ ಕಂಡಂತೆ ಕಸ

* ಚಟುವಟಿಕೆಯ ನಿರೂಪಕರು ಚಿತ್ರ ಬಿಡಿಸಲು ಸಲಕರಣೆಗಳನ್ನು ನೀಡುವುದು {ಬಿಳಿಹಾಳೆ, ಸ್ಕೆಚ್ ಪೆನ್ನುಗಳು, ಪೆನ್ಸಿಲ್, ರಬ್ಬರ್, ಸ್ಕೇಲ್ ಇತ್ಯಾದಿ}
* "ನಾ ಕಂಡಂತೆ ಕಸ" ಎಂಬ ವಿಷಯಕ್ಕೆ ಸಂಬಂಧಿಸಿದಂತೆ ಗುಂಪಿನಲ್ಲಿ ಒಂದು ಚಿತ್ರವನ್ನು ಬಿಡಿಸಲು ಅವಕಾಶ ನೀಡುವುದು. ಅಂದರೆ ತಂಡದ ಸದಸ್ಯರು ಅವರ ದಿನನಿತ್ಯದಲ್ಲಿ ನೋಡಿರುವ ಕಸ ಮತ್ತು ಅದರ ನಿರ್ವಹಣೆಗೆ ಸಂಬಂಧಿಸಿದ ಸನ್ನಿವೇಶಗಳನ್ನು ಬಿಡಿಸಲು ತಿಳಿಸಬೇಕು. ಉದಾಹರಣೆಗೆ ಕಸದ ವಾಹನಕ್ಕೆ ಕಸವನ್ನು ಹಾಕುತ್ತಿರುವ ಚಿತ್ರ ಇತ್ಯಾದಿ.

  ಚಿತ್ರ ಬಿಡಿಸಿದ ನಂತರ ಪ್ರತಿ ಗುಂಪಿಗೂ ತಾವು ಬಿಡಿಸಿದ ಚಿತ್ರದ ಬಗ್ಗೆ ಮಾಹಿತಿ ನೀಡಲು ತಿಳಿಸುವುದು.

### ಎರಡನೇ ಹಂತ : ಚಿತ್ರ ನೋಡಿ ಅಭಿವ್ಯಕ್ತಿಸುವುದು.

ವಿಷಯಕ್ಕೆ ಅನುಗುಣವಾಗಿ ಈ ಮೇಲ್ಕಂಡಂತೆ ವಿವಿಧ ರೀತಿಯ ಚಿತ್ರಪಟಗಳನ್ನು ತಂಡಗಳಿಗೆ ನೀಡಿ ಅವುಗಳ ಬಗ್ಗೆ 2 ರಿಂದ 5 ನಿಮಿಷ ಮಾತನಾಡುವಂತೆ ಹೇಳುವುದು.

### ಮೂರನೇ ಹಂತ : ಅನುಭವಗಳ ಅಭಿವ್ಯಕ್ತಿ

ಚಟುವಟಿಕೆಯ ನಿರೂಪಕನು ಚಟುವಟಿಕೆಯಿಂದ ಆಗುವ ಅನುಭವವನ್ನು ತಂಡದ ಸದಸ್ಯರಿಂದ ಪಡೆದು ಅಭಿನಂದಿಸಿ ಅನುಭವ ಚಟುವಟಿಕೆಯನ್ನು ಮುಕ್ತಾಯಗೊಳಿಸುವುದು.

ಅವಲೋಕನ :

ತರಗತಿ 1–3 : (60 ನಿಮಿಷಗಳು)

# "ನನ್ನ ಪಾತ್ರ"

ಬಸ್/ರೈಲು ನಿಲ್ದಾಣ

ಶಾಲೆ

ಮನೆ

ಬ್ಯಾಂಕು

ಅಂಗಡಿ

**ನಿರೂಪಕರಿಗೆ/ವಿದ್ಯಾರ್ಥಿ ನಾಯಕರಿಗೆ ಸೂಚನೆಗಳು :**

**ಮೊದಲ ಹಂತ : ಸ್ಥಳ ವೈವಿಧ್ಯಮಯ – ನನ್ನ ಪಾತ್ರ ಗಣನೀಯ.**

ಚಟುವಟಿಕೆಯ ನಿರೂಪಕನು ಪ್ರತಿ ತಂಡದ ಸದಸ್ಯರಿಗೆ ವಿವಿಧ ಸ್ಥಳಗಳ/ಪರಿಸರದ ಹೆಸರುಗಳನ್ನು ಬರೆದಿರುವ ಮಿಂಚು ಪಟ್ಟಿಗಳನ್ನು ನೀಡಿ ಆ ಪರಿಸರದಲ್ಲಿ ಅಥವಾ ಆ ಸ್ಥಳದಲ್ಲಿ ಕಸವನ್ನು ಹೇಗೆ ನಿರ್ವಹಣೆ ಮಾಡುವರು ಎಂಬ ವಿಚಾರವನ್ನು ಈಗಾಗಲೇ ಅರಿತು ಅನುಭವಿಸಿದಂತೆ ಅಭಿವ್ಯಕ್ತಿಸುವಂತೆ ತಿಳಿಸುವುದು.

**ಎರಡನೇ ಹಂತ : ಚರ್ಚಾ ಕೂಟ.**

**ಚರ್ಚಾಂಶ :** "ಘನ ತ್ಯಾಜ್ಯ ನಿರ್ವಹಣೆಯಲ್ಲಿ ನನ್ನ ಪಾತ್ರ" (ಇನ್ನಿತರ ಚರ್ಚಾಂಶಗಳನ್ನು ನೀಡಬಹುದು)

**ಮೂರನೇ ಹಂತ : ಅನುಭವಗಳ ಅಭಿವ್ಯಕ್ತಿ**

ಚಟುವಟಿಕೆಯ ನಿರೂಪಕನು ಚಟುವಟಿಕೆಯಿಂದ ಆಗುವ ಅನುಭವವನ್ನು ತಂಡದ ಸದಸ್ಯರಿಂದ ಪಡೆದು ಅಭಿನಂದಿಸಿ ಅವಲೋಕನ ಚಟುವಟಿಕೆಯನ್ನು ಮುಗಿಸಿ ಪ್ರತಿಜ್ಞಾ ವಿಧಿಯನ್ನು ಸಿದ್ಧಗೊಳಿಸುವುದು.



'ನಿಂತ ನೀರಲ್ಲಿ ಕ್ರಿಮಿ ಹುಟ್ಟುತ್ತವೆ. ಕೆಲಸವಿಲ್ಲದ ಮನುಷ್ಯನಲ್ಲಿ ಕೆಟ್ಟ ವಿಚಾರಗಳು ಜನಿಸುತ್ತವೆ.'

**ಅರಿವು :**

**ತರಗತಿ 4–5 :** **(60 ನಿಮಿಷಗಳು)**

# ಕಸ ನಿಜವಾಗಿಯೂ ಕಸವೇ

**ಹಾಡನ್ನು ಹಾಡೋಣ**

ಹಾಕೋರಪ್ಪ ಹಾಕ್ಯಾರ
ನೆಲಕ ಕಸವ ಹಾಕ್ಯಾರ
ಎಸಿತಾರಪ್ಪ ಎಸಿತಾರ
ತ್ಯಾಜ್ಯವ ಎಲ್ಲೆಡೆ ಎಸಿತಾರ

ರೋಗ ಹೇಗೆ ಬಂತಪ್ಪ
ಏಕೆ ಹೀಗೆ ಆಯ್ತಪ್ಪ
ರೋಗಕೆ ಕಾರಣ ನಾವಪ್ಪ
ನಮ್ಮ ಅಜ್ಞಾನ ಸಾಕಪ್ಪ

ಹಚ್ಚಿರಪ್ಪ ಹಚ್ಚಿರೋ
ಸ್ವಚ್ಛತೆ ಹಣತೆ ಹಚ್ಚಿರೋ







ಕಸ ಮುಕ್ತ ನಗರವನ್ನಾಗಿಸಲು ಪಣ

**ನಿರೂಪಕರಿಗೆ/ವಿದ್ಯಾರ್ಥಿ ನಾಯಕರಿಗೆ ಸೂಚನೆಗಳು :**

**ಮೊದಲ ಹಂತ : ಹಾಡನ್ನು ಹಾಡೋಣ**

ಚಟುವಟಿಕೆಯ ನಿರೂಪಕನು ಈ ಮೇಲಿನ ಹಾಡನ್ನು ಹೇಳಿಕೊಡುವ ಮೂಲಕ ಚಟುವಟಿಕೆಯನ್ನು ಪ್ರಾರಂಭಿಸಬೇಕು. ರಾಗ ಸಂಯೋಜನೆಗೆ ಶಿಕ್ಷಕರ ಸಹಾಯ ಪಡೆದುಕೊಳ್ಳಿ.

**ಎರಡನೇ ಹಂತ : ಪತ್ರಿಕಾ ವರದಿ – ಅಭಿವ್ಯಕ್ತಿಯ ಸರದಿ**

ಚಟುವಟಿಕೆಯ ನಿರೂಪಕನು ಮುಂಚಿತವಾಗಿ ಕಸದ ನಿರ್ವಹಣೆ ಹಾಗೂ ಸೂಕ್ತ ವಿಲೇವಾರಿ ಮಾಡದಿದ್ದರೆ ಆಗುವ ದುಷ್ಪರಿಣಾಮಗಳ ಬಗ್ಗೆ ಜಾಗೃತಿ ಮೂಡಿಸುವಂತಹ ಪತ್ರಿಕೆಯ ವರದಿಗಳನ್ನು ಸಂಗ್ರಹಿಸಿಕೊಂಡಿರಬೇಕು. ಚಟುವಟಿಕೆಯ ದಿನದಂದು ಪ್ರತಿ ತಂಡಗಳಿಗೆ ನೀಡಬೇಕು, ನಂತರ ಆ ವರದಿಯ ಬಗ್ಗೆ ತಮ್ಮ ಗುಂಪಿನಲ್ಲಿ ಚರ್ಚಿಸಿ ಅಭಿವ್ಯಕ್ತಿಸುವಂತೆ ಹೇಳುವುದು.

**ಮೂರನೇ ಹಂತ : ಅನುಭವಗಳ ಅಭಿವ್ಯಕ್ತಿ**

ಚಟುವಟಿಕೆಯ ನಿರೂಪಕನು ಚಟುವಟಿಕೆಯಿಂದ ಆಗುವ ಅನುಭವವನ್ನು ತಂಡದ ಸದಸ್ಯರಿಂದ ಪಡೆದು ಅಭಿನಂದಿಸಿ ಅರಿವು ಚಟುವಟಿಕೆಯನ್ನು ಮುಕ್ತಾಯಗೊಳಿಸುವುದು.



'ಕೆಟ್ಟದ್ದನ್ನು ಬಯಸಬೇಡ, ಒಳ್ಳೆಯದನ್ನು ಬಿಡಬೇಡ'

ಅನುಭವ :

ತರಗತಿ 4–5 : (60 ನಿಮಿಷಗಳು)

# ಅಭಿನಯದ ಅನುಭವ

ಪ್ರಾಣಿಯು ಕಸವನ್ನು (ಪ್ಲಾಸ್ಟಿಕ್‌ನ್ನು) ತಿಂದ ನಂತರ ನರಳಾಡಿ ಪ್ರಾಣ ಬಿಡುವುದು.

ಕಸವಿಲೇವಾರಿ ಮಾಡದೆ ದುರ್ವಾಸನೆಯಿಂದ ಕೂಡಿದ ನಗರದ ಜನರ ಪರದಾಟದ ಸ್ಥಿತಿ–ಗತಿ

**ಮೂಕಾಭಿನಯದ ಅಲೆ ಅನುಭವದ ಸೆಲೆ**

ಗ್ರಾಮದ ಜನರು ಒಂದೆಡೆ ಕಸವನ್ನು ಶೇಖರಿಸಿ ಅದಕ್ಕೆ ಬೆಂಕಿ ಹಚ್ಚುತ್ತಿರುವುದು.

ಕಸ ವಿಲೇವಾರಿ ಮಾಡಿ ಕಸದ ವಾಹನಕ್ಕೆ ಹಾಕುತ್ತಿರುವ ಜನರು

**ನಿರೂಪಕರಿಗೆ/ವಿದ್ಯಾರ್ಥಿ ನಾಯಕರಿಗೆ ಸೂಚನೆಗಳು :**

**ಮೊದಲ ಹಂತ :** ಚಟುವಟಿಕೆಯ ನಿರೂಪಕರು ಮೂಕಾಭಿನಯದ ಸನ್ನಿವೇಶಕ್ಕೆ ಸಂಬಂಧಿಸಿದ ವಿಚಾರಗಳನ್ನು ಚೀಟಿಯಲ್ಲಿ ಬರೆದು ಪ್ರತಿಗುಂಪಿಗೆ ನೀಡುವುದು, ಆ ಗುಂಪಿನ ಎಲ್ಲ ಸದಸ್ಯರು ಸಿಕ್ಕಿರುವ ಸನ್ನಿವೇಶದ ಬಗ್ಗೆ ಮೂಕಾಭಿನಯ ಮಾಡಿ ತೋರಿಸಬೇಕು. ನಂತರ ಬೇರೆ ಗುಂಪಿನ ಸದಸ್ಯರು ವಿಚಾರವನ್ನು ಊಹಿಸಿ ಹೇಳಬೇಕು.

**ಎರಡನೇ ಹಂತ :** ಚಟುವಟಿಕೆಯ ನಿರೂಪಕನು ಚಟುವಟಿಕೆಯಿಂದ ಆಗುವ ಅನುಭವವನ್ನು ತಂಡದ ಸದಸ್ಯರಿಂದ ಪಡೆದು ಅಭಿನಂದಿಸಿ ಅನುಭವ ಚಟುವಟಿಕೆಯನ್ನು ಮುಕ್ತಾಯಗೊಳಿಸುವುದು.


## ಅವಲೋಕನ :

**ತರಗತಿ 4–5 :** (60 ನಿಮಿಷಗಳು)





**ಕಸದಿಂದ ರಸ**





### ನಿರೂಪಕರಿಗೆ/ವಿದ್ಯಾರ್ಥಿ ನಾಯಕರಿಗೆ ಸೂಚನೆಗಳು :

**ಮೊದಲ ಹಂತ :**

- ಚಟುವಟಿಕೆಯ ನಿರೂಪಕನು ಮೊದಲೇ ಸಂಗ್ರಹಿಸಿಕೊಂಡಿರುವ ಅನುಪಯುಕ್ತ ವಸ್ತುಗಳಾದ ಕಾಗದಗಳು, ಚಾಕಲೇಟ್ ಸಿಪ್ಪೆಗಳು, ಪ್ಲಾಸ್ಟಿಕ್ ಬಾಟಲಿಗಳು, ಹಳೆಯ ಬಟ್ಟೆಗಳು ಮುಂತಾದ ವಸ್ತುಗಳನ್ನು ನೀಡಿ ಉಪಯುಕ್ತ ವಸ್ತುಗಳಾಗಿ ಮಾಡಲು ಮಾರ್ಗದರ್ಶನ ನೀಡುವುದು.
- ನಂತರ ಘನ ತ್ಯಾಜ್ಯವಸ್ತುಗಳು ನಿನಗೆ ವರವೆನಿಸುವುದೋ – ಶಾಪವೆನಿಸುವುದೋ? ಎಂಬುವುದನ್ನು ಗುಂಪುಗಳಲ್ಲಿ ಅನಿಸಿಕೆ ಹೇಳಿಸುವುದು.


**ಎರಡನೇ ಹಂತ :**

- ಚಟುವಟಿಕೆಯ ನಿರೂಪಕನು ಚಟುವಟಿಕೆಯಿಂದ ಆಗುವ ಅನುಭವವನ್ನು ತಂಡದ ಸದಸ್ಯರಿಂದ ಪಡೆದು ಅಭಿನಂದಿಸಿ ಅವಲೋಕನ ಚಟುವಟಿಕೆಯನ್ನು ಮುಗಿಸಿ ಪ್ರತಿಜ್ಞಾ ವಿಧಿಯನ್ನು ಮಾಡಲು ಸಿದ್ಧಗೊಳಿಸುವುದು.

ಅರಿವು :

ತರಗತಿ 6–8 : ಪ್ರೌಢ ಹಂತ (60 ನಿಮಿಷಗಳು)

# ಬನ್ನಿ ಚಿತ್ರ ಬಿಡಿಸೋಣ !




**ನಿರೂಪಕರಿಗೆ/ವಿದ್ಯಾರ್ಥಿ ನಾಯಕರಿಗೆ ಸೂಚನೆಗಳು :**

**ಮೊದಲ ಹಂತ : ಆಶುಭಾಷಣ**

ಕಸದ ನಿರ್ವಹಣೆ ವಿಷಯಕ್ಕೆ ಸಂಬಂಧಿಸಿದ ವಿಷಯಗಳನ್ನು ಪ್ರತಿ ತಂಡಕ್ಕೆ ನೀಡಿ ಆ ವಿಷಯದ ಬಗ್ಗೆ 5 ರಿಂದ 6 ನಿಮಿಷ ಮಾತನಾಡಬೇಕು.

ಹಸಿಕಸದ ನಿರ್ವಹಣೆ, ಒಣಕಸದ ನಿರ್ವಹಣೆ, ಕಸದಿಂದ ರಸ, ಕಸದ ಸೂಕ್ತ ವಿಲೇವಾರಿ, ಕಸದಿಂದಾಗುವ ದುಷ್ಪರಿಣಾಮಗಳು ಮುಂತಾದ ವಿಷಯಗಳನ್ನು ನೀಡಬಹುದು.

**ಭಾಷಣ/ಪ್ರಬಂಧ/ಚಿತ್ರ ರಚನೆ/ಭಿತ್ತಿಪತ್ರ ರಚನೆ/ಚಿತ್ರಸುರಳಿ ತೋರಿಸುವುದು. ನಂತರ ಚಟುವಟಿಕೆಗಳನ್ನು ಮಾಡಿಸುವುದು.**

**ಎರಡನೇ ಹಂತ : ಅನುಭವಗಳ ಅಭಿವ್ಯಕ್ತಿ**

ಚಟುವಟಿಕೆಯ ನಿರೂಪಕನು ಚಟುವಟಿಕೆಯಿಂದ ಆಗುವ ಅನುಭವವನ್ನು ತಂಡದ ಸದಸ್ಯರಿಂದ ಪಡೆದು ಅಭಿನಂದಿಸಿ ಅರಿವು ಚಟುವಟಿಕೆಯನ್ನು ಮುಕ್ತಾಯಗೊಳಿಸುವುದು.





'ಕ್ರಿಯಾಶೀಲತೆ ಯಶಸ್ಸಿನ ಕೀಲಿ ಕೈಯಾಗಿದೆ' - ಎಪಿಜೆ ಅಬ್ದುಲ್ ಕಲಾಂ

ಅನುಭವ :

ತರಗತಿ 6–8 : (60 ನಿಮಿಷಗಳು)

# ಅಭಿನಯದ ಅನುಭವ

ಪ್ರಾಣಿಯು ಕಸವನ್ನು (ಪ್ಲಾಸ್ಟಿಕ್‌ನ್ನು) ತಿಂದ ನಂತರ ನರಳಾಡಿ ಪ್ರಾಣ ಬಿಡುವುದು.

ಕಸವಿಲೇವಾರಿ ಮಾಡದೆ ದುರ್ವಾಸನೆಯಿಂದ ಕೂಡಿದ ನಗರದ ಜನರ ಪರದಾಟದ ಸ್ಥಿತಿ–ಗತಿ

**ಮೂಕಾಭಿನಯದ ಅಲೆ ಅನುಭವದ ಸೆಲೆ**

ಗ್ರಾಮದ ಜನರು ಒಂದೆಡೆ ಕಸವನ್ನು ಶೇಖರಿಸಿ ಅದಕ್ಕೆ ಬೆಂಕಿ ಹಚ್ಚುತ್ತಿರುವುದು.

ಕಸ ವಿಲೇವಾರಿ ಮಾಡಿ ಕಸದ ವಾಹನಕ್ಕೆ ಹಾಕುತ್ತಿರುವ ಜನರು

**ನಿರೂಪಕರಿಗೆ/ವಿದ್ಯಾರ್ಥಿ ನಾಯಕರಿಗೆ ಸೂಚನೆಗಳು :**

**ಮೊದಲ ಹಂತ :** ಚಟುವಟಿಕೆಯ ನಿರೂಪಕರು ಮೂಕಾಭಿನಯದ ಸನ್ನಿವೇಶಕ್ಕೆ ಸಂಬಂಧಿಸಿದ ವಿಚಾರಗಳನ್ನು ಚೀಟಿಯಲ್ಲಿ ಬರೆದು ಪ್ರತಿ ಗುಂಪಿಗೆ ನೀಡುವುದು. ಆ ಗುಂಪಿನ ಎಲ್ಲ ಸದಸ್ಯರು ಸಿಕ್ಕಿರುವ ಸನ್ನಿವೇಶದ ಬಗ್ಗೆ ಮೂಕಾಭಿನಯ ಮಾಡಿ ತೋರಿಸಬೇಕು. ನಂತರ ಬೇರೆ ಗುಂಪಿನ ಸದಸ್ಯರು ವಿಚಾರವನ್ನು ಊಹಿಸಿ ಹೇಳಬೇಕು.

**ಎರಡನೇ ಹಂತ :** ಚಟುವಟಿಕೆಯ ನಿರೂಪಕನು ಚಟುವಟಿಕೆಯಿಂದ ಆಗುವ ಅನುಭವವನ್ನು ತಂಡದ ಸದಸ್ಯರಿಂದ ಪಡೆದು ಅಭಿನಂದಿಸಿ ಅನುಭವ ಚಟುವಟಿಕೆಯನ್ನು ಮುಕ್ತಾಯಗೊಳಿಸುವುದು.

ಅವಲೋಕನ :

ತರಗತಿ 6–8 : (60 ನಿಮಿಷಗಳು)

# ಚಟುವಟಿಕೆ ಹೆಸರು : ನನ್ನ ಪಾತ್ರ

## ಚಟುವಟಿಕೆಯ ವಿಧಾನ : ಘೋಷಣಾ ವಾಕ್ಯಗಳ ರಚನೆ

**ಉದಾ :** ಕಸ ವಿಂಗಡಣೆ ಮಾಡೋಣ – ಸ್ವಚ್ಛ ಭಾರತ ಕಟ್ಟೋಣ.
ಒಂದು ಹೆಜ್ಜೆ ಸ್ವಚ್ಛತೆಯೆಡೆಗೆ – ಸ್ವಚ್ಛತೆಯ ಶಕ್ತಿ ಅಡಿಗಡಿಗೆ.

1. Let's save our Earth
2. Save Earth for your future generations
3. Earth is the only livable planet; just save it
4. Save Earth; Save Environment
5. Make your every day Earth Day
6. Let's save our mother Earth
7. It's time to act; save the planet Earth
8. Unite to make planet Earth pollution-free
9. Save Earth from Global Warming
10. Let's work together for a safe Earth
11. Less pollution is the best solution
12. Lesser the pollution, better the life
13. Pollution is our silent enemy, just finish it silently
14. Prevent environmental health hazards
15. Silence is the best tool to combat noise pollution
16. Keep planting trees to hit air pollution
17. Tree plantation is the best option against pollution
18. Pollution is injurious to health
19. Air pollution is the main cause of several respiratory diseases.

### ಅಥವಾ

**ಚರ್ಚಾ ಕೂಟ**

"ಕಸ ಮುಕ್ತ ಭಾರತವನ್ನಾಗಿ ಮಾಡುವಲ್ಲಿ ನಾಗರಿಕನಾಗಿ ನನ್ನ ಜವಾಬ್ದಾರಿ" ಎಂಬ ವಿಷಯದ ಬಗ್ಗೆ ಪ್ರಬಂಧ ಬರೆಯಿಸುವುದು ಅಥವಾ ಚರ್ಚೆ ಮಾಡಿಸುವುದು.

**ಕಸದಿಂದ ರಸ**

ನಿಮಗೆ ಲಭ್ಯವಿರುವ ತ್ಯಾಜ್ಯಗಳಿಂದ ನೀನು ಉಪಯುಕ್ತ ವಸ್ತುಗಳನ್ನು ತಯಾರಿಸು.

ಚಟುವಟಿಕೆಯ ನಿರೂಪಕನು ಚಟುವಟಿಕೆಯಿಂದ ಆಗುವ ಅನುಭವವನ್ನು ತಂಡದ ಸದಸ್ಯರಿಂದ ಪಡೆದು ಅಭಿನಂದಿಸಿ ಅವಲೋಕನ ಚಟುವಟಿಕೆಯನ್ನು ಮುಗಿಸಿ ಪ್ರತಿಜ್ಞಾ ವಿಧಿಯನ್ನು ಸಿದ್ದಗೊಳಿಸುವುದು.

**ಸೂಚನೆ :** ಈ ಮೇಲ್ಕಂಡ ವಿವಿಧ ಚಟುವಟಿಕೆಗಳನ್ನು ಹಮ್ಮಿಕೊಳ್ಳುವ ಮತ್ತು ಇನ್ನಿತರ ಸೃಜನಾಶೀಲ ಚಟುವಟಿಕೆಗಳನ್ನು ರಚಿಸಿ ಅವುಗಳನ್ನು ಅಳವಡಿಸಿಕೊಳ್ಳುವ ಅವಕಾಶವಿರುವುದು. ಈ ಚಟುವಟಿಕೆಗಳಲ್ಲಿ ಶಿಕ್ಷಕರು ಕೇವಲ ಸುಗಮಕಾರರಾಗಿ ಕಾರ್ಯನಿರ್ವಹಿಸಬೇಕು. ಇಡೀ ಚಟುವಟಿಕೆಯು ಶಿಶುಕೇಂದ್ರಿತವಾಗಿರಬೇಕು ಹಾಗೂ ಮಗುವಿನ ಅಭಿವ್ಯಕ್ತಿ ಸ್ವಾತಂತ್ರ್ಯವನ್ನು ಪ್ರೋತ್ಸಾಹಿಸುವಂತಿರಬೇಕು.





'ಒಬ್ಬ ಒಳ್ಳೆಯ ವ್ಯಕ್ತಿಗೆ ಮೋಸ ಮಾಡುವುದೆಂದರೆ ಕೈಯಲ್ಲಿರುವ ವಜ್ರವನ್ನು ಎಸೆದು ಕಲ್ಲನ್ನು ಎತ್ತಿಕೊಂಡಂತೆ' - ಎಪಿಜೆ ಅಬ್ದುಲ್ ಕಲಾಂ

# ಪ್ರತಿಜ್ಞೆ



- ಭಾರತದ ಪ್ರಜೆಯಾದ ನಾನು ಭಾರತ ಸಂವಿಧಾನದ ಮೂಲಭೂತ ಕರ್ತವ್ಯಗಳಲ್ಲಿ ಬಹು ಮುಖ್ಯವಾದ ಪರಿಸರ ಸಂರಕ್ಷಣೆಗೆ ಬದ್ಧನಾಗಿರುತ್ತೇನೆ. ಈ ದಿಸೆಯಲ್ಲಿ ನಾನು ಪರಿಸರದ ಕಾಳಜಿಯಲ್ಲಿ ಪ್ರಮುಖವಾಗಿರುವ ಕಸದ ನಿರ್ವಹಣೆಯಲ್ಲಿ ನನ್ನ ಜವಾಬ್ದಾರಿಯನ್ನು ಅರಿತುಕೊಂಡಿದ್ದೇನೆ.
- ಕಸವನ್ನುಕೇವಲ ಕಸವೆಂದೆಣಿಸದೆ, ಅದರ ಸೂಕ್ತ ವಿಲೇವಾರಿ ಮತ್ತು ನಿರ್ವಹಣೆ ಮಾಡುತ್ತೇನೆ. ಈ ಬಗ್ಗೆ ನನ್ನ ಪರಿಸರದ ಸುತ್ತಲಿನ ಜನತೆಗೆ ಅರಿವು ಮೂಡಿಸುವ ಕರ್ತವ್ಯ ನನ್ನದಾಗಿರುತ್ತದೆ.
- ಅಲ್ಲದೆ, ಕಸವನ್ನು ಪುನರ್ಬಳಕೆ ಮಾಡುವ ವಿಧಾನಗಳನ್ನು ತಿಳಿಸುವುದಷ್ಟೇ ಅಲ್ಲದೆ ತ್ಯಾಜ್ಯ ನಿರ್ವಹಣೆಯಲ್ಲಿ ನಾನು ಎಲ್ಲರಿಗೂ ಮಾದರಿಯಾಗಿ ಪರಿಸರದ ಆರೋಗ್ಯಕ್ಕೆ ಮತ್ತು ಒಳಿತಿಗೆ ದುಡಿಯುತ್ತೇನೆ ಎಂದು ಈ ಮೂಲಕ ಪ್ರತಿಜ್ಞೆ ಮಾಡುತ್ತೇನೆ.

**"ಕಸಮುಕ್ತ ಭಾರತ**
**ಸ್ವಚ್ಛತೆಯಲಿ ತೇಲುತ."**
**"ಒಂದು ಹೆಜ್ಜೆ ಸ್ವಚ್ಛತೆಯೆಡೆಗೆ**
**ಸ್ವಚ್ಛತೆಯ ಶಕ್ತಿ ಅಡಿಗಡಿಗೆ."**

## ಸಲಹಾತ್ಮಕ ಚಟುವಟಿಕೆಗಳು :

ಘನತ್ಯಾಜ್ಯ ನಿರ್ವಹಣೆ ಪ್ರಸ್ತುತ ದಿನಗಳಲ್ಲಿ ಬಹುದೊಡ್ಡ ಸವಾಲಾಗಿದೆ. ಸರ್ಕಾರ ಈ ನಿಟ್ಟಿನಲ್ಲಿ ಎಷ್ಟೇ ಕ್ರಮ ಕೈಗೊಂಡರೂ ಸಮುದಾಯದ ಸಹಾಯದ ಹೊರತಾಗಿ ಇದು ಕೈಗೂಡದು. ಆದ್ದರಿಂದ ನಾಳಿನ ಪ್ರಜೆಗಳಾದ ವಿದ್ಯಾರ್ಥಿಗಳು ಈ ನಿಟ್ಟಿನಲ್ಲಿ ದೃಢ ಸಂಕಲ್ಪ ತೊಡುವುದು ಅತ್ಯವಶ್ಯವಾಗಿದೆ. ಈ ಚಟುವಟಿಕೆಗೆ ಪೂರಕವಾಗಿ ಯೋಜನಾ ಕಾರ್ಯಗಳನ್ನು ನಿರ್ವಹಿಸಲು ವಿದ್ಯಾರ್ಥಿಗಳಿಗೆ ಸೂಚಿಸುವುದು. ಕೆಲವು ಉದಾಹರಣೆಗಳನ್ನು ನೀಡಿದೆ.

1. ಚರ್ಚಾಕೂಟಗಳನ್ನು ಏರ್ಪಡಿಸಿ ಹೊರದೇಶಗಳಲ್ಲಿ ಘನತ್ಯಾಜ್ಯ ನಿರ್ವಹಣೆಗೆ ಕೈಗೊಂಡಿರುವ ಕ್ರಮಗಳು, 3R ಗಳಾದ Re-use, Reduce, Recycle ಗಳ ಬಗ್ಗೆ ಚರ್ಚಿಸುವುದು.
2. ಹತ್ತಿರದ ಕಾರ್ಖಾನೆ, ಆಸ್ಪತ್ರೆ ಹಾಗೂ ನಿಮ್ಮ ಶಾಲೆಗಳಲ್ಲೇ ಘನತ್ಯಾಜ್ಯ ನಿರ್ವಹಣೆ ಹೇಗಿದೆ ಎಂಬುದನ್ನು ಕ್ಷೇತ್ರ ಪ್ರಮಾಸ ಮಾಡಿಸಿ.
3. ಸ್ಥಳೀಯವಾಗಿ ವಾಸಿಸುತ್ತಿರುವ ನಿವೃತ್ತ ವಿಜ್ಞಾನಿಗಳು, ಅಭಿಯಂತರುಗಳನ್ನು ಶಾಲೆಗೆ ಕರೆಸಿ ಮಾರ್ಗದರ್ಶನ ನೀಡುವುದು.



*'Save the environment, make our planet a cleaner place to live'*